# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1151 |
| 2) | ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 22-09-2021 |
| 4) | ಉತ್ತರಿಸಬೇಕಾದ ಸಚಿವರು | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮೀನುಗಾರಿಕಾ ಬಂದರಿನ ಅಭಿವೃದ್ಧಿಗೆ ಕಳೆದ 5 ವರ್ಷಗಳಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ; ಎಷ್ಟು ಹೊಸ ಮೀನುಗಾರಿಕಾ ಬಂದರುಗಳು ಮೀನುಗಾರರ ಬಳಕೆಗೆ ಲಭ್ಯವಾಗಿದೆ; ಮೀನುಗಾರರಿಗೆ ಬಂದರಿನಲ್ಲಿ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತದೆ; | ರಾಜ್ಯದ ಮೀನುಗಾರಿಕೆ ಬಂದರಿನ ಅಭಿವೃದ್ಧಿಗಾಗಿ (ಹೂಳೆತ್ತುವ ಕಾಮಗಾರಿ ಸೇರಿ) ಕಳೆದ 5 ವರ್ಷಗಳಲ್ಲಿ ವೆಚ್ಚ ಮಾಡಿದ ಮೊತ್ತದ ವಿವರ ಈ ಕೆಳಗಿನಂತೆ ನೀಡಲಾಗಿದೆ.<br>(ರೂ.ಲಕ್ಷಗಳಲ್ಲಿ)<br>ವರ್ಷ : ಮೊತ್ತ<br>2016-17 : 4157.15<br>2017-18 : 3569.77<br>2018-19 : 8328.92<br>2019-20 : 6684.82<br>2020-21 : 3479.66<br>2021-22 (ಆಗಸ್ಟ್ 2021 ರವರೆಗೆ) : 1299.88<br><br>ಈ ಅವಧಿಯಲ್ಲಿ ಯಾವುದೇ ಹೊಸ ಮೀನುಗಾರಿಕೆ ಬಂದರುಗಳು ಮೀನುಗಾರರ ಬಳಕೆಗೆ ಲಭ್ಯವಾಗಿರುವುದಿಲ್ಲ.<br><br>ಮೀನುಗಾರಿಕೆ ಇಲಾಖೆಯಿಂದ ಮೀನುಗಾರರಿಗೆ ಬಂದರಿನಲ್ಲಿ ದೋಣಿಗಳಿಗೆ ಲಂಗರು ಹಾಕುವುದು, ಹರಾಜು ಪ್ರಾಂಗಣ, ಶೈತ್ಯಾಗಾರಗಳು, ಶೌಚಾಲಯ, ವಿಶ್ರಾಂತಿ ಕೊಠಡಿಗಳು, ನೆಟ್ ಮೆಂಡಿಂಗ್ ಶೆಡ್‌ಗಳು, ರ್‍ಯಾಂಪ್ ಗಳು, ಲ್ಯಾಂಡಿಂಗ್ ಜೆಟ್ಟಿ, ಬರ್ತಿಂಗ್ ಜೆಟ್ಟಿ, ಬೇಸಿನ್, ಬ್ರೇಕ್‌ವಾಟರ್, ಹರಾಜು ಮಳಿಗೆಗಳು, ರೆಸ್ಟ್ ಶೆಡ್, ಗೇರ್‌ಶೆಡ್, ಗೋದಾಮುಗಳು, ಕ್ಯಾಂಟೀನ್, ವಿದ್ಯುತ್, ನೀರು ಸರಬರಾಜು, ಒಳಚರಂಡಿ, ರಸ್ತೆ, ಬೋಟ್ ದುರಸ್ತಿಯ ಯಾರ್ಡ್, ಸ್ಲೋಪಿಂಗ್ ಹಾರ್ಡ್, ಇ.ಟಿ.ಪಿ., ಸಮುದಾಯ ಭವನ, ಡ್ರೆಡ್ಜಿಂಗ್, ಸ್ಲಿಪ್‌ವೇ, ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. |

| | | |
|---|---|---|
| ಆ) | ಕಳೆದ 3 ವರ್ಷಗಳಲ್ಲಿ ಎಷ್ಟು ಮೀನುಗಾರರಿಗೆ ಡೀಸೆಲ್ ಸಬ್ಸಿಡಿ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಡೀಸೆಲ್ ಸಬ್ಸಿಡಿ ನೀಡಲಾಗಿರುವ ಜಿಲ್ಲಾವಾರು ವಿವರ ಈ ಕೆಳಕಂಡಂತೆ ನೀಡಲಾಗಿದೆ:- |

| ಜಿಲ್ಲೆ | ವರ್ಷ | ಸಹಾಯಧನ ಮೊತ್ತ (ರೂ.ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ (ದೋಣಿ) |
|---|---|---|---|
| ಉಡುಪಿ | 2018-19 | 2750.98 | 1457 |
| | 2019-20 | 6690.57 | 1534 |
| | 2020-21 | 7313.57 | 1613 |
| ದಕ್ಷಿಣ ಕನ್ನಡ | 2018-19 | 6144.54 | 953 |
| | 2019-20 | 5743.59 | 1022 |
| | 2020-21 | 4464.56 | 1057 |
| ಉತ್ತರ ಕನ್ನಡ | 2018-19 | 1287.83 | 842 |
| | 2019-20 | 1075.36 | 769 |
| | 2020-21 | 1081.61 | 728 |

| | | |
|---|---|---|
| ಇ) | ಮೀನುಗಾರರು ಕರ್ನಾಟಕ ಮತ್ಸ್ಯವಿಕಾಸ ಯೋಜನೆಯನ್ವಯ ಯಾವರೀತಿಯ ತಾಂತ್ರಿಕತೆಯನ್ನು ಅಳವಡಿಸಲು ಪ್ರೋತ್ಸಾಹಿಸಲಾಗಿದೆ; ಇದರಿಂದ ಮೀನುಗಾರರು ಎಷ್ಟು ಲಾಭ ಗಳಿಸಿರುತ್ತಾರೆ; ಈ ಯೋಜನೆಗೆ ಸರ್ಕಾರ ಯಾವ ಯಾವ ರೀತಿಯಲ್ಲಿ ವೆಚ್ಚ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು) | ಕರ್ನಾಟಕ ಮತ್ಸ್ಯವಿಕಾಸ ಯೋಜನೆಯಡಿ ತಾಂತ್ರಿಕತೆಯನ್ನು ಅಳವಡಿಸಲು ಪ್ರೋತ್ಸಾಹಿಸಲು ಹೊಸ ಯೋಜನೆಯನ್ನು 2020-21ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿತ್ತು. ಆದರೆ, ಕೋವಿಡ್-19ರ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಅನುದಾನ ಒದಗಿಸುವುದು ಕಷ್ಟಸಾಧ್ಯವಾದ್ದರಿಂದ ಸದರಿ ಯೋಜನೆಯನ್ನು ಕೈಬಿಡಲಾಗಿರುತ್ತದೆ. |

ಸಂಖ್ಯೆ: ಪಸಂಮೀ ಇ-261 ಮೀಇಯೋ 2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು